ಕರ್ನಾಟಕ ವಿಧಾನ ಸಭೆ

ಗುರುವಾರ 24ನೇ ಜುಲೈ 2003 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11-10 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಎಂ.ಎ. ವೆಂಕಟಪ್ಪ) ರವರು

ಪೀಠವನ್ನು ಅಲಂಕರಿಸಿದ್ದರು

1) ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಅಧ್ಯಕ್ಷರು : ಈಗ ಮೊದಲನೇ ಕಾರ್ಯಕ್ರಮ ಪ್ರಶ್ನೋತ್ತರ ವೇಳೆ. ಮೊದಲ ಪ್ರಶ್ನೆ ಮತ್ತು ಇನ್ನೊಂದು ಪ್ರಶ್ನೆ ಕಾಮನ್ ಆಗಿದೆ. ಮಾನ್ಯ ಹಾಲಾಡಿ ಶ್ರೀನಿವಾಸ ಶೆಟ್ಟರು ಮತ್ತು ಕೌಜಲಗಿ ಮಹಾಂತೇಶ್ ಇಬ್ಬರ ಪ್ರಶ್ನೆಗಳು ಕಾಮನ್ ಆಗಿದೆ. ಕಬ್ಬಿನ ಬೆಳೆಗಾರರಿಗೆ ಬಿಲ್ ಪಾವತಿ ಮಾಡುವ ಬಗ್ಗೆ. ಅದು ಫ್ಯಾಕ್ಟರಿ ಬೇರೆ ಇರಬಹುದು. ಇದೂ ಅಷ್ಟೆ. ಬ್ರಹ್ಮಾವರ ಸಕ್ಕರೆ ಫ್ಯಾಕ್ಟರಿ, ಎರಡೂ ಸೇಮ್.

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ಕಾರ್ಖಾನೆಗಳು ಬೇರೆ. ಬ್ರಹ್ಮಾವರ ಸಮಸ್ಯೆ ಬೇರೆ, ಅಲ್ಲಿನ ಸಮಸ್ಯೆಯೇ ಬೇರೆ.

ಅಧ್ಯಕ್ಷರು : ಒಪ್ಪಿಕೊಂಡೆ. ಸಬ್ಜೆಕ್ಟ್ ಮ್ಯಾಟರ್ ಒಂದೇ ತಾನೇ? ಹಣ ಕೊಟ್ಟಿಲ್ಲ ಎನ್ನುವುದು. ಎರಡನ್ನೂ ಕ್ಲಬ್ ಮಾಡೋಣ ಎಂದು ಅಷ್ಟೇ. ಎರಡೂ ಸೇಮ್ ಸಬ್ಜೆಕ್ಟ್ ಇದೆ. ಎರಡನ್ನೂ ಕ್ಲಬ್ ಮಾಡಿದರೆ ನಮಗೆ ಸಮಯ ಉಳಿಯುತ್ತದೆ ಅಷ್ಟೆ.

ಉಡುಪಿ ಜಿಲ್ಲೆಯ ಬ್ರಹ್ಮಾವರ ಸಕ್ಕರೆ ಕಾರ್ಖಾನೆಯ ರೈತರಿಗೆ ಹಣ ಪಾವತಿ ಮಾಡದೇ ಇರುವ ಬಗ್ಗೆ

462(4157) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) : ಮಾನ್ಯ ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯ ಬ್ರಹ್ಮಾವರ ಸಕ್ಕರೆ ಕಾರ್ಖಾನೆ ರೈತರು ಕೊಡುವ ಕಬ್ಬಿಗೆ ಟನ್ 1ಕ್ಕೆ ಎಷ್ಟು ಬೆಲೆ ಕೊಡಲಾಗುತ್ತಿದೆ; ಪ್ರತಿ ವರ್ಷ ದರಗಳಲ್ಲಿ ಬದಲಾವಣೆ ಇದೆಯೇ; ಇದ್ದಲ್ಲಿ ವಿವರ ಕೊಡುವುದು;

ಆ) 2001-02 ಮತ್ತು 2002-03ನೇ ಸಾಲಿನಲ್ಲಿ ರೈತರಿಂದ ಎಷ್ಟು ಟನ್ ಕಬ್ಬು ಪಡೆಯಲಾಗಿದೆ; (ವರ್ಷಾವಾರು ವಿವರ ನೀಡುವುದು);

ಇ) ರೈತರು ಕಾರ್ಖಾನೆಗೆ ಕಬ್ಬು ಒದಗಿಸಿದ ಮೇಲೆ ಪಾವತಿಯಾಗದೆಯಿರುವ ಬಾಕಿ ಹಣವೆಷ್ಟು;(ವರ್ಷಾವಾರು ವಿವರ ಒದಗಿಸುವುದು);

ಈ) ಬಾಕಿ ಇದ್ದಲ್ಲಿ ಪಾವತಿಸದೇ ಇರಲು ಕಾರಣವೇನು;

ಉ) ಕಾರ್ಖಾನೆ ನಷ್ಟದಲ್ಲಿ ನಡೆಯುತ್ತಿದೆಯೇ ಹಾಗಿದ್ದಲ್ಲಿ ಎಷ್ಟು ಹಣ ನಷ್ಟವಾಗಿದೆ; ಸದರಿ ನಷ್ಟ ನಿಭಾಯಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಂ. ಮಹಾದೇವ್ (ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು) :

ಅ) ದಕ್ಷಿಣ ಕನ್ನಡ ಸಹಕಾರ ಸಕ್ಕರೆ ಕಾರ್ಖಾನೆ(ನಿ) ಬ್ರಹ್ಮಾವರ, ಉಡುಪಿ ಜಿಲ್ಲೆ ಇದರ 2002–03ನೇ ಸಾಲಿನಲ್ಲಿ ಕಬ್ಬು ಸರಬರಾಜು ಮಾಡಿದ ರೈತರಿಗೆ ಕೇಂದ್ರ ಸರ್ಕಾರದ ಆದೇಶ ಸಂ.ಜಿ.ಎಸ್.ಆರ್–19 (ಇ) ಇಎಸ್ಎಸ್/ಕಾಂ/ಶುಗರ್ಕೇಸ್/ ದಿ: 9–1–03ರಲ್ಲಿ ಶಾಸನಬದ್ಧ ಕನಿಷ್ಟ ಬೆಲೆ ನಿಗದಿಪಡಿಸಿದಂತೆ ಟನ್ 1ಕ್ಕೆ ರೂ. 736.00 ರಂತೆ ಪಾವತಿಸಲಾಗುತ್ತಿದೆ. ಪ್ರತಿವರ್ಷ ಕಬ್ಬಿನ ಖರೀದಿ ದರದಲ್ಲಿ ಬದಲಾವಣೆ ಇರುತ್ತದೆ. ಹಿಂದಿನ ಸಾಲಿನಲ್ಲಿ ರೂ.800/– ರಂತೆ ಪಾವತಿಸಲಾಗಿದೆ.

ಆ) 2001–02ನೇ ಸಾಲಿಗೆ 55,328 ಟನ್ ಮತ್ತು 2002–03ನೇ ಸಾಲಿಗೆ 57.369 ಟನ್ ಕಬ್ಬನ್ನು ರೈತರಿಂದ ಪಡೆಯಲಾಗಿದೆ.

ಇ) ರೈತರು ಕಾರ್ಖಾನೆಗೆ ಕಬ್ಬು ಒದಗಿಸಿದ ಬಾಬ್ತು 2001–02 ಮತ್ತು 2002–03ನೇ ಸಾಲಿನ ಬಾಬ್ತು ರೂ. 325.02 ಲಕ್ಷಗಳು ಪಾವತಿಗೆ ಬಾಕಿ ಇರುತ್ತದೆ. ವರ್ಷಾವಾರು ವಿವರ ಈ ಕೆಳಗಿನಂತಿದೆ:

2001–02	–	ರೂ. 96.00 ಲಕ್ಷ
2002–03	–	ರೂ. 229.02 ಲಕ್ಷ

ಈ) ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ(ನಿ) ಬ್ರಹ್ಮಾವರ. ಇದರ ಕಬ್ಬು ಅರೆಯುವಿಕೆಯು ಪ್ರಾರಂಭದಿಂದಲೂ ಅರೆತಕ್ಕೆ ಬೇಕಾದಷ್ಟು ಪ್ರಮಾಣದ ಕಬ್ಬು ದೊರೆಯದ ಕಾರಣ ಕಾರ್ಖಾನೆಯು ಪ್ರಾರಂಭದಿಂದಲೂ ನಷ್ಟವನ್ನು ಹೊಂದುತ್ತ ಬಂದಿರುತ್ತದೆ. ಹೀಗಾಗಿ ಕಾರ್ಖಾನೆಯ ತೀವ್ರವಾದ ಆರ್ಥಿಕ ತೊಂದರೆಯಿಂದಾಗಿ 2001–02 ಮತ್ತು 2002–03ನೇ ಸಾಲಿನ ಕಬ್ಬು ಸರಬರಾಜು ರೈತರಿಗೆ ಹಣ ಪೂರ್ತಿಯಾಗಿ ಪಾವತಿಸಲು ಕಾರ್ಖಾನೆಗೆ ಸಾಧ್ಯವಾಗಿರುವುದಿಲ್ಲ.

ಉ) ಕಾರ್ಖಾನೆಯು ದಿನಾಂಕ : 31–3–2002ಕ್ಕೆ ರೂ. 33.74 ಕೋಟಿಗಳ ಕ್ರೋಢೀಕೃತ ನಷ್ಟವನ್ನು ಹೊಂದಿದೆ. ಮುಂದೆ ಸಾಮರ್ಥ್ಯಕ್ಕನುಗುಣವಾಗಿ ಕಬ್ಬು ಲಭ್ಯವಾದರೆ, ನಷ್ಟ ನಿಭಾಯಿಸಲು ಪ್ರಯತ್ನಿಸಲಾಗುವುದು.

ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯ ರೈತರಿಗೆ ಹಣ ಪಾವತಿಸದೇ ಇರುವ ಬಗ್ಗೆ

473(4145) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯವರು ರೈತರಿಗೆ ಕಬ್ಬಿನ ಬಿಲ್ಲನ್ನು ಕೊಡದೆ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ; ಎಷ್ಟು ಹಣವನ್ನು ಕೊಡಬೇಕಾಗಿರುವುದು ಹಾಗೂ ಇನ್ನೂ ಎಷ್ಟು ದಿವಸಗಳಲ್ಲಿ ಬಿಲ್ಲನ್ನು ಕೊಡಲಾಗುವುದು;

ಆ) ರೈತರು ಕಾರ್ಖಾನೆಗೆ ಕಬ್ಬು ಪೂರೈಸಿದ ಎಷ್ಟು ದಿವಸಗಳೊಳಗಾಗಿ ಬಿಲ್ಲನ್ನು ಕೊಡಬೇಕೆಂದು ನಿಯಮ ಇರುವುದು;

ಇ) ಅವಧಿ ಒಳಗಾಗಿ ಬಿಲ್ಲನ್ನು ಕೊಡದೇ ಇದ್ದಲ್ಲಿ ರೈತರಿಗೆ ಕಾರ್ಖಾನೆಯಿಂದ ಬಡ್ಡಿ ಕೊಡಲು ಕ್ರಮ ಕೈಗೊಳ್ಳಲಾಗುವುದೇ;

ಈ) ಕಾರ್ಖಾನೆಯವರು ಒಟ್ಟು ಎಷ್ಟು ಹಣ ರೈತರಿಗೆ, ನೌಕರದಾರರಿಗೆ ಮತ್ತು ಬ್ಯಾಂಕಿನವರಿಗೆ ಕೊಡಬೇಕಾಗಿರುವುದು; ಎಷ್ಟು ಮೊತ್ತದ ಸಕ್ಕರೆ ಕಾರ್ಖಾನೆಯಲ್ಲಿರುವುದು; ಕಾರ್ಖಾನೆಯಲ್ಲಿ ಸಕ್ಕರೆ ಮಾರಿದರೂ ಕೂಡ ಇನ್ನೂ ಸಾಲ ತೀರಿಸಲು ಎಷ್ಟು ಹಣ ಬೇಕಾಗುವುದು?